ಸಂಖ್ಯೆ. ಎ.ಡಿ.ಎಂ.I(ಎ)187/2005

ನಗರ ಸಿವಿಲ್ ನ್ಯಾಯಾಲಯದ ಕಾರ್ಯಾಲಯ,
ಬೆಂಗಳೂರು

ದಿನಾಂಕ : 21.2.2005.

# ನೇಮಕಾತಿ ಪ್ರಕಟಣೆ

ಬೆಂಗಳೂರು, ನಗರ ಸಿವಿಲ್ ನ್ಯಾಯಾಲಯ ಘಟಕದಲ್ಲಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕೆಳಕಂಡ ಷರತ್ತುಗಳನ್ನು ಪೂರೈಸಿದ ಅರ್ಹ ಅಭ್ಯರ್ಥಿಗಳು ದಿನಾಂಕ 21.3.2005 ಸಂಜೆ 4 ಗಂಟೆಯೊಳಗೆ ಲಗತ್ತಿಸಿದ ನಮೂನೆಯಲ್ಲಿ ಅರ್ಜಿಗಳನ್ನು ಸಲ್ಲಿಸಲು ಸೂಚಿಸಿದೆ.

## 1. ಖಾಲಿ ಹುದ್ದೆಯ ವಿವರಗಳು :

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಖಾಲಿ ಹುದ್ದೆಗಳ ಸಂಖ್ಯೆ | ವೇತನ ಶ್ರೇಣಿ |
|---|---|---|---|
| 1 | ಬೆರಳಚ್ಚುಗಾರರು | 9 | 3000-75-3450-100-4450-125-5450+ ವಿಶೇಷ ವೇತನ ರೂ. 60/- |
| 2 | ನಕಲು- ಬೆರಳಚ್ಚುಗಾರರು | 2 | 3000-75-3450-100-4450-125-5450+ವಿಶೇಷ ವೇತನ ರೂ . 25/- |

## 2. ಖಾಲಿ ಹುದ್ದೆಗಳ ವರ್ಗೀಕರಣ :

ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ 8 ಸಹಿಮ 95 ದಿನಾಂಕ: 20-6-95 ಮತ್ತು ಸರ್ಕಾರಿ ಆದೇಶ ಸಂಖ್ಯೆ ಸಿ ಆಸು ಇ 97 ಸೇಸನಿ 2002 ದಿನಾಂಕ 22-11-2002ರ ಪ್ರಕಾರ ಕಾದಿರಿಸಿದ ಹುದ್ದೆಗಳ ವರ್ಗೀಕರಣ:

ಬೆರಳಚ್ಚುಗಾರರ ಹುದ್ದೆಗಳು

| | ಸಾಮಾನ್ಯ ಅಭ್ಯರ್ಥಿ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಪ್ರವರ್ಗ – I | ಪ್ರವರ್ಗ–II ಎ | ಪ್ರವರ್ಗ– II ಬಿ | ಪ್ರವರ್ಗ– III ಎ | ಪ್ರವರ್ಗ– III ಬಿ | ಒಟ್ಟು |
|---|---|---|---|---|---|---|---|---|---|
| 1 ಮಹಿಳಾ ಅಭ್ಯರ್ಥಿ | 1 | - | - | - | - | - | - | - | 1 |
| 2 ಮಾಜಿ ಸೈನಿಕರು | 1 | 1 | - | - | 1 | - | - | - | 3 |
| 3 ಗ್ರಾಮೀಣ ಅಭ್ಯರ್ಥಿ | 1 | - | - | - | - | - | - | - | 1 |
| 4 ಇತರೇ ಅಭ್ಯರ್ಥಿ | 1 | 1 | - | 1 | 1 | - | - | - | 4 |
| ಒಟ್ಟು | 4 | 2 | - | 1 | 2 | - | - | - | 9 |

ನಕಲು ಬೆರಳಚ್ಚುಗಾರರ ಹುದ್ದೆಗಳು

| | ಸಾಮಾನ್ಯ ಅಭ್ಯರ್ಥಿ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಪ್ರವರ್ಗ – I | ಪ್ರವರ್ಗ–II ಎ | ಪ್ರವರ್ಗ–II ಬಿ | ಪ್ರವರ್ಗ–III ಎ | ಪ್ರವರ್ಗ–III ಬಿ | ಒಟ್ಟು |
|---|---|---|---|---|---|---|---|---|---|
| 1 ಮಹಿಳಾ ಅಭ್ಯರ್ಥಿ | 1 | - | - | - | - | — | - | - | 1 |
| 2 ಇತರೇ ಅಭ್ಯರ್ಥಿ | - | - | - | - | - | 1 | - | - | 1 |
| ಒಟ್ಟು | 1 | - | - | - | - | 1 | - | - | 2 |

| | | |
|---|---|---|
| 1 | ನೇಮಕಾತಿ ವಿಧಾನ | ಕರ್ನಾಟಕ ಅಧೀನ ನ್ಯಾಯಾಲಯಗಳು (ಲಿಪಿಕ ಮತ್ತು ಇತರ ಹುದ್ದೆಗಳು ) (ನೇಮಕಾತಿ )ನಿಯಮಗಳು 1982 , ಕರ್ನಾಟಕ ನಾಗರೀಕ ಸೇವೆಗಳು (ಆಯ್ಕೆಯಿಂದ ನೇರ ನೇಮಕಾತಿ) ನಿಯಮಗಳು, 1973 ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರ ಪ್ರಕಾರ |
| 2 | ಅರ್ಜಿಗಳನ್ನು ಕಳುಹಿಸಬೇಕಾದ ವಿಳಾಸ | ವಿಲೇಖನಾಧಿಕಾರಿಗಳು,<br>ನಗರ ಸಿವಿಲ್ ನ್ಯಾಯಾಲಯ,<br>ಬೆಂಗಳೂರು- 560009 |
| 3 | ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ | ದಿನಾಂಕ 21.3.2005 ರಂದು ಸಂಜೆ 4 ಗಂಟೆಯವರೆಗೆ |
| 4 | ವಿದ್ಯಾರ್ಹತೆ:<br>ಅ ) ಬೆರಳಚ್ಚುಗಾರರ ಹುದ್ದೆಗೆ | ಅಭ್ಯರ್ಥಿಯು ಎಸ್ ಎಸ್ ಎಲ್ ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ನಡೆಸುವ ಆಂಗ್ಲ ಹಾಗೂ ಕನ್ನಡ ಭಾಷೆಗಳ ಹಿರಿಯ ಶ್ರೇಣಿಯ ಬೆರಳಚ್ಚು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು. |
| | ಆ ) ಬೆರಳಚ್ಚು - ನಕಲುಗಾರರ ಹುದ್ದೆಗೆ | ಅಭ್ಯರ್ಥಿಯು ಎಸ್ ಎಸ್ ಎಲ್ ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ನಡೆಸುವ ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿ ಕಿರಿಯ ಶ್ರೇಣಿಯ ಬೆರಳಚ್ಚು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು. |
| 5 | ವಯೋಮಿತಿ | ಅಭ್ಯರ್ಥಿಯು 18 ವರ್ಷ ಪೂರೈಸಿರಬೇಕು ಮತ್ತು ಗರಿಷ್ಠ ವಯಸ್ಸು ಕೆಳಕಂಡಂತಿದೆ.<br>1 ಅನುಸೂಚಿತ ಜಾತಿ ಮತ್ತು ಪಂಗಡ ಹಾಗೂ ಪ್ರವರ್ಗ-1 ರ ಅಭ್ಯರ್ಥಿಗಳಿಗೆ 38 ವರ್ಷ ಮೀರಿರಬಾರದು.<br>2 ಗುಂಪು- II-ಎ, II-ಬಿ, III- ಎ, III - ಬಿ ಅಭ್ಯರ್ಥಿಗಳಿಗೆ 36 ವರ್ಷ ಮೀರಿರಬಾರದು.<br>3 ಸಾಮಾನ್ಯ ಅಭ್ಯರ್ಥಿಗಳಿಗೆ 33 ವರ್ಷ ಮೀರಿರಬಾರದು.<br>4 ವಯಸ್ಸಿನ ಮಿತಿಯನ್ನು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ರಾಜ್ಯ / ಕೇಂದ್ರ ಸರ್ಕಾರಿ ನೌಕರರು / ಮಾಜಿ ಸೈನಿಕರು / ಅಂಗವಿಕಲ ಅಭ್ಯರ್ಥಿಗಳು / ಹಾಗೂ ವಿಧವೆಯರ ಬಗ್ಗೆ ಕೆ.ಸಿ.ಎಸ್. (ಸಾಮಾನ್ಯ ನೇಮಕಾತಿ ) ನಿಯಮಗಳು 1977 ರ ಪ್ರಕಾರ ಸಡಿಲಿಕೆಯನ್ನು ಕೊಡಲಾಗುವುದು. |

ಸೂಚನೆ :

1. ನೇಮಕಾತಿಯನ್ನು ಕರ್ನಾಟಕ ನಾಗರೀಕ ಸೇವೆಗಳು ( ಆಯ್ಕೆಯಿಂದ ನೇರ ನೇಮಕಾತಿ ) ನಿಯಮಗಳು 1973 ರ ನಿಯಮ 5 ರ ಪ್ರಕಾರ ಅರ್ಹತಾ ಪಟ್ಟಿಯನ್ನು ತಯಾರಿಸಿ ಪ್ರತಿ ವರ್ಗದಲ್ಲಿ ಪ್ರತಿ ಹುದ್ದೆಗೆ 10 ಅಭ್ಯರ್ಥಿಗಳಂತೆ ಸಂದರ್ಶನಕ್ಕೆ ಕರೆಯಲಾಗುವುದು. ಸಂದರ್ಶನಕ್ಕೆ 50 ಗರಿಷ್ಠ ಅಂಕಗಳನ್ನು ನಿಗಧಿಪಡಿಸಿದ್ದು ನಿಯಮ 6 ರ ಪ್ರಕಾರ ಅಭ್ಯರ್ಥಿಯ ಸೂಕ್ತತೆ ಬಗ್ಗೆ ತಿಳಿದುಕೊಳ್ಳಲು ಸಂದರ್ಶನ ನಡೆಸಲಾಗುವುದು. ಸಂದರ್ಶನ ಹಾಗೂ ಅರ್ಹತಾ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳ ಶೇಕಡಾವಾರು ಅಂಕಗಳ ಆಧಾರದ ಮೇಲೆ ಆಯ್ಕೆಪಟ್ಟಿಯನ್ನು ತಯಾರಿಸಿ ಪ್ರಕಟಿಸಲಾಗುವುದು. ಯಾವುದೇ ಅಭ್ಯರ್ಥಿಗೆ ಸಂದರ್ಶನ ಪತ್ರ ಬಾರದಿದ್ದಲ್ಲಿ ಆತನು ಸಂದರ್ಶನಕ್ಕೆ ಅರ್ಹನಿಲ್ಲವೆಂದು ತಿಳಿದುಕೊಳ್ಳತಕ್ಕದ್ದು. ಈ ಸಂಬಂಧ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶವಿಲ್ಲ .
2. ನೇಮಕಾತಿಯು ತಾತ್ಕಾಲಿಕವಾಗಿದ್ದು 2 ವರ್ಷದ ಪರೀಕ್ಷಾರ್ಥ ಅವಧಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ.
3. ಅಭ್ಯರ್ಥಿಯು ಈಗಾಗಲೇ ಸರ್ಕಾರಿ ನೌಕರಿಯಲ್ಲಿದ್ದರೆ ಅರ್ಜಿಗಳನ್ನು ನೇಮಕಾತಿ ಅಧಿಕಾರಿಗಳ ಮೂಲಕವೇ ಕಳುಹಿಸಬೇಕು.

4. ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ಪ್ರಕಾರ ಅಥವಾ ಇನ್ನಾವುದೇ ನಿಯಮಗಳ ಪ್ರಕಾರ ಅಭ್ಯರ್ಥಿಯು ಅನರ್ಹನಾಗಿದ್ದಲ್ಲಿ ನೇಮಕಾತಿಗೆ ಅರ್ಹರಾಗುವುದಿಲ್ಲ.

5. ಮೂಲ ಪ್ರಮಾಣ ಪತ್ರಗಳನ್ನು ಸಂದರ್ಶನ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

ಅಭ್ಯರ್ಥಿಗಳು ಅರ್ಜಿಯೊಂದಿಗೆ ಕೆಳಕಂಡ ದಾಖಲಾತಿಗಳ ದೃಢೀಕೃತ ನಕಲನ್ನು ಸಲ್ಲಿಸತಕ್ಕದ್ದು ತಪ್ಪಿದಲ್ಲಿ ಯಾವ ಸೂಚನೆಯನ್ನೂ ಕೊಡದೆ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

1 ಹುಟ್ಟಿದ ದಿನಾಂಕದ ಬಗ್ಗೆ ಎಸ್ ಎಸ್ ಎಲ್ ಸಿ ಸರ್ಟಿಫಿಕೇಟ್, ಜನನ ಪ್ರಮಾಣ ಪತ್ರ, ಅಥವಾ ಶಾಲಾ ವರ್ಗಾವಣೆ ಪತ್ರ, ಇತ್ಯಾದಿ.

2 ವಿದ್ಯಾರ್ಹತೆ ಬಗ್ಗೆ ಅಂಕಪಟ್ಟಿಗಳ ದೃಢೀಕೃತ ನಕಲು.

3 ಈಗಾಗಲೇ ಸೇವೆಯಲ್ಲಿರುವವರ ಬಗ್ಗೆ ಸೇವಾ ದೃಢೀಕರಣ ಪತ್ರ .

4 ಪ್ರವರ್ಗ-I ಕ್ಕೆ ಸೇರಿದ ಅಭ್ಯರ್ಥಿಗಳು ನಿಗದಿತ ನಮೂನೆ 'ಇ' ಪ್ರಕಾರ ಪಡೆದ ಜಾತಿ ಪ್ರಮಾಣ ಪತ್ರ.

5 ಪ್ರವರ್ಗ II-ಎ, II-ಬಿ, III-ಎ ಮತ್ತು III-ಬಿ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಸರ್ಕಾರಿ ಅಧಿಸೂಚನೆ ಸಂಖ್ಯೆ ಎಸ್.ಡಬ್ಲ್ಯೂ.ಡಿ. 126 ಬಿಸಿಎ 2002 ದಿ. 13-2-2003 ರಲ್ಲಿ ನಿಗಧೀಕರಿಸಿದ್ದ ಫಾರಂ 'ಎಫ್' ಪ್ರಕಾರ ಸಂಬಂಧಿತ ತಹಸೀಲ್ದಾರ್‌ರವರು ನೀಡಿರುವ ಜಾತಿ ಮತ್ತು ಆದಾಯ ದೃಢೀಕರಣ ಪತ್ರ.

6 ಗ್ರಾಮೀಣ ಅಭ್ಯರ್ಥಿಗಳು ಆದೇಶ ಸಂಖ್ಯೆ ಸಿಆಸುಇ 06 ಸೆನಿ 2001 ದಿ. 13-2-2001 ರ ರೀತ್ಯಾ ನಮೂನೆ 1 ಮತ್ತು 2 ರಲ್ಲಿ ನಿಗಧಿತ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.

7 ಮಾಜಿ ಸೈನಿಕ ಹಾಗೂ ಅಂಗವಿಕಲ ಅಭ್ಯರ್ಥಿಗಳು ಸೂಕ್ತ ಅಧಿಕಾರಿಗಳು ನೀಡಿರುವ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.

8 ಯೋಜನೆಗಳಿಂದ ನಿರಾಶ್ರಿತರಾದ ಅಭ್ಯರ್ಥಿಗಳು ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 44 ಸೆನಿ 2001 ದಿನಾಂಕಃ 27-7-2001ರ ಪ್ರಕಾರ ನಿಗದಿತ ಪ್ರಮಾಣ ಪತ್ರ ಸಲ್ಲಿಸಬೇಕು.

9. ಕನ್ನಡ ಮಾಧ್ಯಮ ಅಭ್ಯರ್ಥಿಗಳಿಗಾಗಿ ಮೀಸಲಾಗಿರುವ ಹುದ್ದೆಗಳಿಗೆ ಅರ್ಜಿ ಸಲ್ಲಿಸುವವರು ಅವರು ಅಧ್ಯಯನ ಮಾಡಿದ ಶಾಲೆಯ ಮುಖ್ಯೋಪಾಧ್ಯಾಯರಿಂದ ಪ್ರಮಾಣ ಪತ್ರ ಪಡೆದು ಅದರ ಧೃಡೀಕೃತ ಪ್ರತಿಯನ್ನು ಮಾತ್ರ ಲಗತ್ತಿಸತಕ್ಕದ್ದು.

ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರ ಆದೇಶದ ಮೇರೆಗೆ.

ವಿಲೇಖನಾಧಿಕಾರಿಗಳು,
ನಗರ ಸಿವಿಲ್ ನ್ಯಾಯಾಲಯ
ಬೆಂಗಳೂರು.

ADM-I (A)/APPMT/NOTN/62